# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 364 |
| ಸದಸ್ಯರ ಹೆಸರು | ಶ್ರೀ ಶರವಣ ಟಿ ಎ |
| ಉತ್ತರಿಸುವ ದಿನಾಂಕ | 11-12-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರತಿ ವರ್ಷ ಹಾಸನಾಂಬ ದೇವಿ ದರ್ಶನದ ಹೊಣೆಯನ್ನು ಯಾವ ಯಾವ ಇಲಾಖೆಗಳಿಗೆ ಜವಾಬ್ದಾರಿ ನೀಡಲಾಗುತ್ತಿದೆ; ಮತ್ತು ಅದರ ಹೊಣೆಗಾರಿಕೆ ಮತ್ತು ಕಾರ್ಯ ವ್ಯಾಪ್ತಿಯ ವಿವರ ನೀಡುವುದು ; | ಪ್ರತಿ ವರ್ಷ ಹಾಸನಾಂಬ ದೇವಿ ದರ್ಶನೋತ್ಸವ ಸಂದರ್ಭದಲ್ಲಿ ಈ ಕೆಳಕಂಡ ಇಲಾಖೆಗಳ ಸಹಕಾರ ಪಡೆಯಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ:- |

| ಕ್ರ. ಸಂ | ಇಲಾಖೆಯ ಹೆಸರು | ಹೊಣೆಗಾರಿಕೆ ನೀಡಲಾದ ಕಾಮಗಾರಿ ಸಂಕ್ಷಿಪ್ತ ವಿವರ |
|---|---|---|
| 1. | ಪ್ರವಾಸೋಧ್ಯಮ | ▪ ಎಲ್.ಇ.ಡಿ ಪರದೆ ನೇರ ಪ್ರಸಾರ ವ್ಯವಸ್ಥೆ<br>▪ ವಾಕಿ ಟಾಕಿ ವ್ಯವಸ್ಥೆ<br>▪ ವಾರ್ ರೂಂ ವ್ಯವಸ್ಥೆ<br>▪ ಸಿಸಿಟಿವಿ ವ್ಯವಸ್ಥೆ<br>▪ ಭಕ್ತರ ಸರತಿ ಸಾಲಿನಲ್ಲಿ ಎಲ್.ಇ.ಡಿ. ಅಳವಡಿಕೆ ಇತರೆ ಕಾಮಗಾರಿ |
| 2 | ತೋಟಗಾರಿಕೆ | ▪ ಅಲಂಕಾರಿಕ ಆರ್ಚ್<br>▪ ನಗರದ 8 ಕಡೆ ಪ್ರವೇಶ ದ್ವಾರಗಳಿಗೆ ನಗರದಾದ್ಯಂತ ಸ್ವಾಗತ ಕಮಾನುಗಳ ಅವಳವಡಿಕೆ<br>▪ ದೇವಾಲಯದ ಆವರಣದಲ್ಲಿ ಹೂವಿನ ಕಲಾಕೃತಿಗಳ ನಿರ್ಮಾಣ<br>▪ ದೇವಾಲಯಕ್ಕೆ ಹೂವಿನ ಅಲಂಕಾರ ವ್ಯವಸ್ಥೆ. |

| | | | | |
|---|---|---|---|---|
| | | 3 | **ನಗರಸಭೆ** | ▪ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ<br>▪ ಶೌಚಾಲಯ ವ್ಯವಸ್ಥೆ |
| | | 4 | **ನಿರ್ಮಿತಿ ಕೇಂದ್ರ** | ▪ ಲಾಡು ಪ್ರಸಾದ ವ್ಯವಸ್ಥೆ<br>▪ ದೊನ್ನೆ ಪ್ರಸಾದ<br>▪ ಬಣ್ಣ ಮತ್ತು ದುರಸ್ತಿ ಕಾಮಗಾರಿಗಳು<br>▪ ದೊನ್ನೆ ಪ್ರಸಾದ ವಿತರಣೆ ಸ್ಥಳಕ್ಕೆ ಜರ್ಮನ್ ಟೆಂಟ್ ಅಳವಡಿಕೆ<br>▪ ಬ್ಯಾರಿಕೇಡಿಂಗ್ ಎಲ್ಇಡಿ ಪರದೆ ವ್ಯವಸ್ಥೆ<br>▪ ಸೌಂಡ್ ಸಿಸ್ಟಂ ವ್ಯವಸ್ಥೆ<br>▪ ಕೌಂಟರ್ ನಿರ್ಮಾಣ ವ್ಯವಸ್ಥೆ<br>▪ ಹೂವಿನ ಅಲಂಕಾರ ವ್ಯವಸ್ಥೆ. |
| | | 5 | **ಲೋಕೋಪಯೋಗಿ** | ▪ ಬ್ಯಾರಿಕೇಡಿಂಗ್ ವ್ಯವಸ್ಥೆ<br>▪ ಮ್ಯಾಟ್ ಮತ್ತು ಜರ್ಮನ್ ಟೆಂಟ್ ವ್ಯವಸ್ಥೆ |
| | | 6 | **ಕಂದಾಯ** | ▪ ಪ್ರಿಂಟಿಂಗ್ ಮೆಟಿರಿಯಲ್ ಮತ್ತು ಇತರೆ |
| | | 7 | **ಬಿ.ಸಿ.ಎಂ.ಇಲಾಖೆ** | ▪ ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಊಟ ಮತ್ತು ತಿಂಡಿ ವ್ಯವಸ್ಥೆ<br>▪ ಕರ್ತವ್ಯಕ್ಕೆ ನಿಯೋಜಿಸಿದ್ದ ಇತರೆ ಇಲಾಖಾ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಊಟ ಮತ್ತು ತಿಂಡಿ ವ್ಯವಸ್ಥೆ. |
| | | 8. | **ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ** | ▪ ಭಕ್ತಾದಿಗಳಿಗೆ ಕುಡಿಯುವ ನೀರು ಮತ್ತು ಮಜ್ಜಿಗೆ ವ್ಯವಸ್ಥೆ |

| | | |
|---|---|---|
| | | ▪ ಸ್ಕೌಟ್ ಗೈಡ್ ಮಕ್ಕಳ ವಾಸ್ತವ್ಯಕ್ಕೆ ವ್ಯವಸ್ಥೆ<br>▪ ಅಗತ್ಯ ಪರಿಕರಗಳ ಸರಬರಾಜು ವ್ಯವಸ್ಥೆ<br>▪ ನಗರದಾದ್ಯಂತ ಫ್ಲೆಕ್ಸ್‌ಗಳ ಅಳವಡಿಕೆ<br>▪ ದೇವಾಲಯದ ಸೂಚನಾ ಫಲಕಗಳು ಮತ್ತು ಇತರೆ. |
| ಆ) | ದೇವಸ್ಥಾನದ ಆಡಳಿತ ಮಂಡಳಿಯು ದೇವಿಯ ದರ್ಶನ ಪಡೆಯಲು ಮತ್ತು ಈ ಸಮಯದಲ್ಲಿ ಕೈಗೊಳ್ಳುವ ವಿಧಿ ವಿಧಾನಗಳ ಬಗ್ಗೆ ಹಾಗೂ ನಿಯಮ ಮತ್ತು ನಿಬಂಧನೆಗಳ ವಿವರ ನೀಡುವುದು; | ಶ್ರೀ ಹಾಸನಾಂಬ ದೇವಾಲಯದ ಬಾಗಿಲನ್ನು ತೆರೆದ ಮೊದಲನೇ ದಿನ ಮತ್ತು ದೇವಿಯ ಬಾಗಿಲನ್ನು ಮುಚ್ಚುವ ಕೊನೆ ದಿನ ಭಕ್ತಾದಿಗಳಿಗೆ ದೇವಿಯ ದರ್ಶನಕ್ಕೆ ಅವಕಾಶವಿರುವುದಿಲ್ಲ ಮತ್ತು ನೈವೇದ್ಯ ಮತ್ತು ದೇವಿಯ ಅಲಂಕಾರ ಸಮಯವನ್ನು ಹೊರತುಪಡಿಸಿ ಉಳಿದ ಸಮಯದಲ್ಲಿ ಭಕ್ತಾದಿಗಳಿಗೆ ದೇವಿಯ ದರ್ಶನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. |
| ಇ) | ಕಳೆದ ಎರಡು ವರ್ಷಗಳಿಂದ ಹಾಸನಾಂಬೆಯ ದರ್ಶನಕ್ಕಾಗಿ ಜಿಲ್ಲಾಡಳಿತ ವ್ಯವಸ್ಥೆಯಲ್ಲಿ ಲೋಪದೋಷಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಲೋಪದೋಷಗಳಿಗೆ ಕಾರಣರಾದವರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರವನ್ನು ನೀಡುವುದು) | ಹಾಸನಾಂಬ ಜಾತ್ರಾ ಮಹೋತ್ಸವದ ಸಂಧರ್ಭದಲ್ಲಿ ಭಕ್ತರ ಸುಗಮ ದರ್ಶನಕ್ಕೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>▪ ಅಂಬುಲೆನ್ಸ್ ಸೇವೆ<br>▪ ಅಗ್ನಿ ಶಾಮಕ ವ್ಯವಸ್ಥೆ<br>▪ ಹಿರಿಯ ನಾಗರಿಕರಿಗೆ ಸುಗಮ ದರ್ಶನಕ್ಕಾಗಿ ವೀಲ್ ಚೇರ್ ವ್ಯವಸ್ಥೆ<br>▪ ವಿದ್ಯುತ್ ಅಪಘಾತವಾಗದಂತೆ ಯು.ಜಿ ಕೇಬಲ್ ವ್ಯವಸ್ಥೆ.<br>▪ ಕಂಟ್ರೋಲ್ ರೂಂ (ಪ್ರತಿ ವ್ಯವಸ್ಥೆಯ ಬಗ್ಗೆ ಮೇಲ್ವಿಚಾರಣೆ ಮಾಡಲು)<br>▪ ವಾಕಿ-ಟಾಕಿ ಬಳಕೆ<br>▪ ಭಕ್ತಾದಿಗಳಿಗೆ ಸುಗಮ ದರ್ಶನಕ್ಕಾಗಿ ಕಂದಾಯ ಇಲಾಖೆಯ ಅಧಿಕಾರಿ ನೌಕರರ ವ್ಯವಸ್ಥೆ<br>▪ ಸ್ಕೌಟ್ಸ್ ಅಂಡ್ ಗೈಡ್ಸ್ ವ್ಯವಸ್ಥೆ<br>▪ ಮಾಹಿತಿ ನೀಡಲು ಮೈಕ್ ಅಳವಡಿಕೆ |

| | | |
|---|---|---|
| | | ▪ ದೇವರ ನೇರ ದರ್ಶನ ಪ್ರಸಾರಕೆ ಎಲ್.ಇ.ಡಿ. ಟಿ.ವಿ ಅಳವಡಿಕೆ<br>▪ ಹೂವಿನ ಅಲಂಕಾರ ವ್ಯವಸ್ಥೆ<br>▪ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ<br>▪ ಜರಮನ್ ಟೆಂಟ್ ಬಳಸಿ ಭಕ್ತರ ಸರತಿ ಸಾಲಿನಲ್ಲಿ ನೆರಳಿನ ವ್ಯವಸ್ಥೆ ಮಾಡಲಾಗಿತ್ತು<br>▪ ನೆಲಕ್ಕೆ ಮ್ಯಾಟ್ ಅಳವಡಿಕೆ ಮಾಡಿ ಭಕ್ತರ ಕಾಲುಗಳು ಸುಡದಂತೆ ವ್ಯವಸ್ಥೆ ಮಾಡಲಾಗಿತ್ತು<br>▪ ಫ್ಯಾನ್ಗಳ ಅಳವಡಿಕೆ<br>▪ ಕುಡಿಯುವ ನೀರಿನ ವ್ಯವಸ್ಥೆ<br>▪ ಮಜ್ಜಿಗೆ ಪೂರೈಕೆ ವ್ಯವಸ್ಥೆ<br>▪ ಶೌಚಾಲಯದ ವ್ಯವಸ್ಥೆ<br>▪ ದೇವಾಲಯದ ಸುತ್ತುಮುತ್ತ ರಸ್ತೆ ದುರಸ್ತಿ ಕಾಂಕ್ರಿಟೀಕರಣ ಹಾಗೂ ಇತರೆ ರಸ್ತೆಗಳ ದುರಸ್ತಿ ಕೈಗೋಳ್ಳಲಾಗಿತ್ತು<br>▪ ಲಾಡೂ ಪ್ರಸಾದ ವ್ಯವಸ್ಥೆ<br>▪ ಎಲ್ಲಾ ಭಕ್ತರಿಗೆ ಉಚಿತವಾಗಿ ಜೊನ್ನೆ ಪ್ರಸಾದ ವಿತರಿಸಲಾಯಿತು.<br><br>ಸಾರ್ವಜನಿಕ ರಜಾ ದಿನಗಳಲ್ಲಿ ನಿರೀಕ್ಷೆಗೂ ಮೀರಿ ಭಕ್ತರ ಸಂಖ್ಯೆ ಒಮ್ಮೆಲೇ ಸಾಗರೋಪಾದಿಯಲ್ಲಿ ಬಂದಿದ್ದರಿಂದ ಹಾಗೂ ಹೆಚ್ಚು ಮಳೆ ಬಂದಿದ್ದರಿಂದ ಅಲ್ಪ ಪ್ರಮಾಣದ ಗೊಂದಲ ಉಂಟಾಗಿತ್ತು. ಒಂದು ಗಂಟೆಯ ಒಳಗಾಗಿ ಗೊಂದಲವನ್ನು ಸರಿಪಡಿಸಲಾಯಿತು. ಇದನ್ನು ಹೊರತುಪಡಿಸಿ ಯಾವುದೇ ಅವಘಡಗಳು ಮತ್ತು ತೊಂದರೆಗಳು ಸಂಭವಿಸಿರುವುದಿಲ್ಲ.<br><br>ಶ್ರೀ ಹಾಸನಾಂಬ ದೇವಾಲಯವು ಹಾಸನ ನಗರದ ಹೃದಯಭಾಗದಲ್ಲಿದ್ದು, ದೇವಾಲಯದ ಸುತ್ತಮುತ್ತ ಅತ್ಯಂತ ಕಿರಿದಾದ ಸ್ಥಳಾವಕಾಶ ಇರುವುದನ್ನು ವಿಸ್ತರಿಸುವ ನಿಟ್ಟಿನಲ್ಲಿ ದೇವಾಲಯದ ಸುತ್ತಮುತ್ತಲಿನ ಕೆಲವು ಪ್ರದೇಶಗಳನ್ನು ಭೂ ಸ್ವಾಧೀನಪಡಿಸಿಕೊಂಡು ಭಕ್ತರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗಿದ್ದು, ಈಗಾಗಲೇ ಮಾಡಿರುವ ವ್ಯವಸ್ಥೆಗಳೊಂದಿಗೆ ಇನ್ನೂ ಉತ್ತಮ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಕ್ರಮವಹಿಸಲಾಗುತ್ತದೆ. |

| | | |
|---|---|---|
| | | ಹಾಸನ ಜಿಲ್ಲೆಯ ಹಾಸನಾಂಬ ದೇವಾಲಯದ ಉತ್ಸವದ ನಿರ್ವಹಣೆ ಮತ್ತು ಖರ್ಚು ವೆಚ್ಚಗಳ ಕುರಿತು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:19.02.2025ರಂದು ನಡೆದ ಸಭೆಯಲ್ಲಿ 2024ನೇ ಸಾಲಿನಲ್ಲಿ ಹಾಸನಾಂಬ ದೇವಾಲಯದ ಹಾಸನಾಂಬ ಉತ್ಸವದ ಖರ್ಚು ವೆಚ್ಚಗಳ ಕುರಿತಂತೆ ಜಿಲ್ಲಾಧಿಕಾರಿಗಳು ಪರಿಶೀಲಿಸಿ ಆಂತರಿಕ ತನಿಖೆ ನಡೆಸಿ 10 ದಿನಗಳ ಒಳಗಾಗಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಆಂತರಿಕ ತನಿಖಾ ವರದಿಯಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು. |

ಸಂಖ್ಯೆ: ಕಂಇ 154 ಮುಸಪ್ರ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು